ಸಿ.ಸಿ.ನಂ. 28760-2005

ಪ್ರಾಸಾಃ 02

ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

| | |
|---|---|
| ಸಾಕ್ಷಿದಾರರ ಹೆಸರು | ಎ.ಆರ್.ರವಿಕುಮಾರ್ |
| ತಂದೆಯ ಹೆಸರು | ರಂಗಯ್ಯ |
| ವಯಸ್ಸು | 61 ವರ್ಷ |
| ಉದ್ಯೋಗ | ಪಿ.ಐ. |
| ವಾಸ | ತಲಘಟ್ಟ ಪುರ, ಬೆಂಗಳೂರು |

ಇಂದು ದಿನಾಂಕಃ 20.03.2024 ರಂದು ಸಾಕ್ಷಿಗೆ **ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು 12.02.2005 ರಿಂದ 10.08.2006 ರವರೆಗೆ ನಾನು ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಅಂತ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 24.03.2005 ರಂದು ಸಂಜೆ 7.00 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ 11 ಜನ ಆರೋಪಿತರೊಂದಿಗೆ 1 ಲಿಖಿತ ದೂರನ್ನು ನೀಡಿ ದೂರಿನಲ್ಲಿ ಬಿಟಿಎಂ 2 ನೇ ಹಂತ, ವೈಷ್ಯಾ ಬ್ಯಾಂಕ್ ಕಾಲೋನಿ ವಾಸವಿ ರೆಸಿಡೆನ್ಸಿಯಲ್ಲಿ ಅಕ್ರಮವಾಗಿ ವೇಶ್ಯಾ ವಾಟಿಗೆ ನಡೆಸಿ ಹಣ ಮಾಡುತ್ತಿದ್ದರು ಅಂತ ಕಾಣಿಸಿದ್ದರು. ಸದರಿ ದೂರಿನ್ನು ಸ್ವೀಕರಿಸಿ ನಮ್ಮ ಠಾಣೆಯ ಮೊಕದ್ದಮೆ ಸಂಖ್ಯೆ 173/2005 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ. ಅನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ದೂರನ್ನು ಈಗಾಗಲೆ ನಿಪಿ2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಹಾಗೂ ಪ್ರವವ ಅನ್ನು ನಿಪಿ 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಚಾಸಾ 1 ರವರು ದೂರಿನೊಂದಿಗೆ ಪಂಚನಾಮೆ ಹಾಜರುಪಡಿಸಿದ್ದು ಅದರಲ್ಲಿ ರೂ 500/- ಮುಖಬೆಲೆಯ 4 ನೋಟುಗಳು

ಒಟ್ಟು ರೂ 2000/- ಹಾಗೂ 5 ನಿರೋದ್ ಪ್ಯಾಕೆಟ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮಾಲು ಪಟ್ಟಿ ಸಂಖ್ಯೆ 32/2005 ರಲ್ಲಿ ದಾಖಲಿಸಿಕೊಂಡೆವು. ನಂತರ ಆರೋಪಿತರನ್ನು ವಿಚಾರಿಸಿ ದಸ್ತಗಿರಿ ಜರುಗಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದೆನು. ನಂತರ ಮುಂದಿನ ತನಿಖೆಯನ್ನು ಚಾಸಾ 11 ರವರಿಗೆ ವಹಿಸಿರುತ್ತೇನೆ. ಆರೋಪಿತರು ಮತ್ತು ಮುದ್ದೆ ಮಾಲನ್ನು ನೋಡಿದರೆ ಗುರುತಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಪಾಟೀಲ ವೀರನಗೌಡ ಎಸ್.)
ಮು. ಮ. ಚಂ. ನ್ಯಾ. ಬೆಂ. ನಗರ.